ಮಾಡಿ, ಯಾವ ರೀತಿಯಾಗಿ ಅದನ್ನು ಮುಂದುವರೆಸಬೇಕು ಅನ್ನತಕ್ಕಂಥದ್ದರ ಬಗ್ಗೆ, ಆ ಚಿಂತನೆಯನ್ನು ಬೇರೆ ರೀತಿಯಲ್ಲಿ ಮಾಡೋಣ. ಆದರೆ ಈಗ ಪ್ರಾಜೆಕ್ಟ್ ದೃಷ್ಟಿಯಿಂದ, ಮಾನ್ಯ ಮಂತ್ರಿಗಳು ಈಗಾಗಲೇ ಭರವಸೆ ಕೊಟ್ಟಿದ್ದಾರೆ. ಆ ಒಂದು ಭರವಸೆಯ ಮೇಲೆ ಇವತ್ತು ಅಲ್ಲಿ ಚಳವಳಿಯನ್ನು ಕೈ ಬಿಟ್ಟು, ಮುಂದಿನ ಒಂದು ನಮ್ಮ representationsಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ, ಮತ್ತೊಮ್ಮೆ ನಾನು ಅವರಿಗೆ ಕೇಳಿಕೊಳ್ಳುತ್ತೇನೆ.

3. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

(ಅ) ವಿಷಯ:– ಐ.ಪಿ. ಸೆಟ್‌ಗಳ ಅಕ್ರಮ ಸಕ್ರಮ ಮಾಡುವ ಬಗ್ಗೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಇಡೀ ರಾಜ್ಯಕ್ಕೆ ಸಂಬಧಪಟ್ಟ ವಿಷಯವನ್ನು ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಇಲ್ಲಿ ಕುಳಿತಿರುವ ನಾವುಗಳ್ಯಾರೂ ನಮ್ಮ ನಮ್ಮ ಕ್ಷೇತ್ರಗಳಿಗೆ ಹೋಗುವುದಕ್ಕೇ ಆಗದಂಥ ಪರಿಸ್ಥಿತಿ ಬಂದೊದಗಿದೆ. ಈಗ ಅಕ್ರಮ – ಸಕ್ರಮ ಎಂದು ಮಾಡುವುದಕ್ಕೆ ಜನರಿಂದ ಸಾಕಷ್ಟು ಕೋಟ್ಯಾಂತರ ರೂಪಾಯಿಗಳನ್ನು ಕಟ್ಟಿಸಿಕೊಳ್ಳಲಾಗಿದೆ. ಅದಕ್ಕೆ ಸಂಬಂಧಪಟ್ಟಂತೆ ಕಂಬಗಳನ್ನು ಹಾಕಿಲ್ಲ. ವೈರ್‌ಗಳನ್ನು ಎಳೆಯಲಿಲ್ಲ. ಮತ್ತು ಟಿ. ಸಿ.ಗಳನ್ನೂ ಹಾಕಿಲ್ಲ. ಇದರ ಪರಿಣಾಮವಾಗಿ "ಓವರ್ ಲೋಡ್ ಆಗಿ ಟಿ.ಸಿ. ಗಳು ಸುಡುತ್ತಿವೆ. ಇವೊತ್ತು ಸಾಗರ ಸಭೆ– ಡಿವಿಶನ್ ಒಂದರಲ್ಲಿಯೇ 120 ಟಿ.ಸಿ. ಗಳು ಸುಟ್ಟಿವೆ. ನೀವು ಬೇಕಾದರೆ ಈಗಲೇ ಫೋನ್‌ಮಾಡಿ ಕೇಳಿ. ಇವುಗಳು ಇನ್ನೂ ರಿಪೇರಿ ಆಗಿಲ್ಲ. ಅದ್ಯಾವೋನೋ ಒಬ್ಬ ಭದ್ರಾವತಿಯವನೊಬ್ಬ ಟೆಂಡರ್ ಹಿಡಿದು ಕೊಂಡಿದ್ದಾನೆ. ಬೇರೆ ಯಾವ ಕಂಟ್ರ್ಯಾಕ್ಟರ್ ಕೂಡ ರಿಪೇರಿ ಮಾಡುವುದಕ್ಕೆ ಮುಂದೆ ಬರುತ್ತಿಲ್ಲ. ಎಕೆಂದರೆ ರಿಪೇರಿ ಮಾಡಿದರೂ "ಓವರ್‌ಲೋಡ್ ಆಗಿ ಟಿ. ಸಿ. ಸುಟ್ಟರೆ ನಾನು ರಿಪೇರಿ ಮಾಡಿಕೊಟ್ಟರೂ ಎಂಟೈರ್ ಟಿ. ಸಿ. ಗಳೆಲ್ಲವೂ ಸುಡಬಹುದಾದ ಕಾರಣ ಆ ಜವಾಬ್ದಾರಿಯನ್ನು ನಾವೇಕೆ ತೆಗೆದುಕೊಳ್ಳಬೇಕು ಎಂದು ಯಾವ ಕಂಟ್ರ್ಯಾಕ್ಟರ್ ಕೂಡ ಮುಂದೆ ಬರುತ್ತಿಲ್ಲ. ಹೀಗಾಗಿ ಯಾರು ಗುತ್ತಿಗೆ ಹಿಡಿದಿದ್ದಾನೋ ಅವನೇ ಈ 120 ಟಿ.ಸಿ. ಗಳನ್ನೂ ರಿಪೇರಿ ಮಾಡಿ ಕೊಡುವುದಕ್ಕೆ ಇನ್ನೂ ಮೂರು ತಿಂಗಳು ಬೇಕಾಗುತ್ತದೆ. ಇನ್ನು ಎರಡನೆಯದಾಗಿ ಕುಡಿಯುವ ನೀರಿಗೆ ಇನ್ನು 15 ಅಥವಾ 20 ದಿವಸದೊಳಗೆ ರಿಪೇರಿ ಮಾಡಿಕೊಡುತ್ತೇವೆ

ಎಂದು ಹೇಳುತ್ತಿದ್ದಾರೆ. ನಿಮ್ಮಿಂದ ಒಂದು ಆದೇಶ ಹೋಗಿದೆ. ಒಂದು ಐವತ್ತು ಟಿ.ಸಿ.ಗಳನ್ನು ಒಂದು ತಿಂಗಳಿಗೆ ರಿಪೇರಿ ಮಾಡಿ ಎಂದು ಆದೇಶ ಹೋಗಿದೆ. ಇದು ನಿಮ್ಮ ಇಲಾಖೆಯ ಆದೇಶವೇ ಆಗಿದೆ. ಅಂದರೆ ಒಟ್ಟು ಅಲ್ಲಿ 120 ಟಿ.ಸಿ. ಗಳು ಇವೆ. ಐವತ್ತರಂತೆ ರಿಪೇರಿ ಮಾಡಿದರೆ ಎರಡೂವರೆ ತಿಂಗಳು ಆಗುತ್ತದೆ. ಹೀಗಾದರೆ ಕುಡಿಯುವ ನೀರಿಗಾಗಿ ಅಲ್ಲಿರುವ ಜನರು ಏನುಮಾಡಬೇಕು ಹೇಳಿ. ಇನ್ನೊಂದು ವಿಚಾರವೆಂದರೆ ನೀರಾವರಿ ಪ್ರದೇಶಗಳನ್ನು ಹೊರತುಪಡಿಸಿ ಬೇರೆ ಕಡೆಗಳಲ್ಲಿ ಮತ್ತೊಂದು ಬರಗಾಲದ ಛಾಯೆ ಮೂಡುತ್ತಿದೆ. ಇಲ್ಲೆಲ್ಲಾ ಇನ್ನೂ ಭಿತ್ತನೆ ಆಗಿಲ್ಲ. ಎಲ್ಲಿ 5 ಎಚ್.ಪಿ., 6 ಎಚ್.ಪಿ. ಮೋಟಾರ್ ಹಾಕಿಕೊಳ್ಳಲಾಗಿದೆಯೋ ಅಲ್ಲಿ ಅವನು ಮೊಳಕೆಗೆ ಭತ್ತವನ್ನು ಹಾಕಿ ನಾಟಿ ಮಾಡುವುದಿರಬಹುದು, ಅಥವಾ ಯಾವುದಾದರೂ ಭಿತ್ತನೆ ಮಾಡುವುದಿರಬಹುದು, ಅದನ್ನೂ ಕೂಡ ಮಾಡುವುದಕ್ಕೆ ಆಗುತ್ತಿಲ್ಲ. ಏಕೆಂದರೆ ಯಾವುದೇ ಕಾರಣಕ್ಕೆ ಐ. ಪಿ. ಸೆಟ್‌ಗಳಿಗೆ ಆದ್ಯತೆಯನ್ನು ಕೊಡುವುದಿಲ್ಲವೆಂದು ನಿಮ್ಮ ಇಲಾಖೆಯ ಅಧಿಕಾರಿಗಳು ಹೇಳುತ್ತಿದ್ದಾರೆ. ಕುಡಿಯುವ ನೀರಿಗೆ ಆದ್ಯತೆ ಇರುವುದರಿಂದ ನೀವುಗಳು ಕಾಯಬೇಕು ಎನ್ನುತ್ತಿದ್ದಾರೆ. ಈ ಭಾಗದಲ್ಲಿ ಮಳೆಗಾಲದಲ್ಲಿ ರೈತರು ನೆಮ್ಮದಿಯಾಗಿದ್ದಾರೆ ಎಂದು ಆ ಅಧಿಕಾರಿಗಳು ಭಾವಿಸಿದ್ದಾರೆ. ನಾನು ಹೇಳುತ್ತಿದ್ದೇನೆ, ನೀವು ಕೋಂಟ್ಯಾಂತರ ರೂಪಾಯಿಗಳನ್ನು ರೈತರಿಂದ ಕಟ್ಟಿಸಿಕೊಂಡ ಮೇಲೆ ನೀವು ಅಲ್ಲಿ ಇಂಪ್ರೂವ್‌ಮೆಂಟ್ಸ್ ಮಾಡುವ ಕಡೆ, ಕಂಬಗಳನ್ನು ಹಾಕುವ ಕಡೆ, ಟಿ. ಸಿ. ಗಳನ್ನು ಹಾಕುವ ಕಡೆ, ಏಕೆ ನೀವು ಗಮನಹರಿಸಿ ಕೆಲಸವನ್ನು ಮಾಡಿಲ್ಲ? ಆದಷ್ಟು ಕೋಟಿ ರೂಪಾಯಿಗಳು ಬಂದಿದೆ. ಏಕೆ ನೀವು ಕೈ ಕಟ್ಟಿಕೊಂಡು ಕುಳಿತ್ತಿದ್ದೀರೀ?, ನಿಮ್ಮ ಕಾಲದಲ್ಲಿ ಈ ಸಮಸ್ಯೆ ಬಗೆಹರಿಯುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಎರಡನೆಯದಾಗಿ ಇವೊತ್ತು ರೈತನ ಪಂಪ್‌ಸೆಟ್‌ಗಳಿಗೆ ಟಿ. ಸಿ. ಇಲ್ಲ. ರಿಪೇರಿ ಇಲ್ಲವೆಂದು ಹೇಳಿ ಅವನು ಭಿತ್ತನೆಯನ್ನೇ ಮಾಡದ ಹಾಗೆ, ಅವನು ಮೊಳಕೆ ಬೀಜವನ್ನೇ ಇಡದ ಹಾಗೆ, ಅವನು ಕೈಕಟ್ಟಿ ಕುಳಿತುಕೊಳ್ಳುವಂಥ ಪರಿಸ್ಥಿತಿ ಬಂದೊದಗಿದೆ, ಇನ್ನು ಮೂರನೆಯದಾಗಿ, ಕುಡಿಯುವ ನೀರಿಗೆ ಹಾಹಾಕಾರ ಇದೆ. ನಾಲ್ಕನೆಯದಾಗಿ ಟಿ. ಸಿ. ಗಳನ್ನು ರಿಪೇರಿ ಮಾಡುವುದಕ್ಕೆ ಯಾವ ಕಂಟ್ರ್ಯಾಕ್ಟರ್ ಕೂಡ ಮುಂದೆ ಬರುತ್ತಿಲ್ಲ. ಏಕೆಂದರೆ ಅವನು ರಿಪೇರಿ ಮಾಡಿಕೊಟ್ಟ 15

ದಿವಸಗಳಲ್ಲಿಯೇ ಓವರ್‌ಲೋಡ್ ಆಗಿ ಸುಟ್ಟುಹೋಗುತ್ತಿದೆ. ನಿಮ್ಮ ಇಲಾಖೆಯ ಅಧಿಕಾರಿಗಳನ್ನು ಕೇಳಿದರೆ ಅವರು ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಕ್ಕೆ ರೆಡಿ ಇಲ್ಲ. ಇದು ಕೇವಲ ಶಿವಮೊಗ್ಗ ಜಿಲ್ಲೆಗೆ ಸೀಮಿತವಾದಂಥದ್ದು ಎಂದಲ್ಲ. ಇದು ಇಡೀ ರಾಜ್ಯದಲ್ಲಿಯೇ ಇಂಥ ಜ್ವಲಂತ ಸಮಸ್ಯೆ ಇದೆ. ಇನ್ನು ನಾಲ್ಕನೆಯದಾಗಿ ರೇವಣ್ಣನವರೇ, ನನಗೆ ಆಶ್ಚರ್ಯಕರ ಸಂಗತಿಯೆಂದರೆ, ನಿಮ್ಮ ಸರ್ಕಾರ ಮುಖ್ಯಮಂತ್ರಿಗಳೇ ತಾವು ಈ ಕಡೆ ಸ್ವಲ್ಪ ಗಮನ ಹರಿಸಬೇಕು, 6 ಪರ್ಸೆಂಟ್ ಬಡ್ಡಿಯಲ್ಲಿ ಸಹಕಾರಿ ಸಾಲವನ್ನು ಕೊಡುತ್ತಿರುವಂಥ ಈ ಕಾಲದಲ್ಲಿ ನೀವು ಐ, ಪಿ. ಸೆಟ್ ತೆಗೆದುಕೊಂಡಂಥವನಿಗೆ ಮೂರು ತಿಂಗಳಿಗೊಮ್ಮೆ ಬಿಲ್ಲನ್ನು ಮಾಡುತ್ತಿದ್ದೀರಿ. ನಿಗದಿತ ಕಾಲದಲ್ಲಿ ಕಟ್ಟದಿದ್ದರೆ ಅವನಿಗೆ ನೀವು 24 ಪರ್ಸೆಂಟ್ ಬಡ್ಡಿಯನ್ನು ಹಾಕುತ್ತಿದ್ದೀರಿ ಯಾರಾದರೂ ನಂಬುವುದಕ್ಕೆ ಸಾಧ್ಯವೇ ಹೇಳಿ. ನಿಮ್ಮ ಇಲಾಖೆ ಈ ರೀತಿ ಮಾಡುತ್ತಿರುವುದನ್ನು ನೀವೇನಾದರೂ ಇದನ್ನು ನೋಡಿದ್ದೀರಾ? ತಿಂಗಳಿಗೆ 2 ಪರ್ಸೆಂಟ್ ಎಂದರೆ 12 ತಿಂಗಳಿಗೆ 24 ಪರ್ಸೆಂಟ್ ಬಡ್ಡಿ ಬೀಳುತ್ತದೆ, ನೀವು ಮೂರು ತಿಂಗಳಿಗೊಮ್ಮೆ ಬಿಲ್ ಮಾಡುತ್ತಿದ್ದೀರಿ, 21 ದಿನಗಳೊಳಗೆ ಕಟ್ಟದೇ ಇದ್ದರೆ, ಬಹುಶ: ನಾನು ನಿಮ್ಮ ಹತ್ತಿರ ಮಾತನಾಡಿದೆ ನಿಮಗೂ ಅಂದಾಜಿದೆಯೋ, ಇಲ್ಲವೋ ಗೊತ್ತಿಲ್ಲ, ತಿಂಗಳಿಗೆ 2 ಪರ್ಸೆಂಟ್ ಬಡ್ಡಿಯನ್ನು ಹಾಕುತಿದ್ದೀರಿ. ಇದು ಧರ್ಮವೇ? ನಾನು ನಿಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ, ವರ್ಷಕ್ಕೆ ಒಮ್ಮೆ ಬಿಲ್ ಮಾಡಿ. ನಾಮಿನಲ್ ಆಗಿ ನೀವೇನಾದರೂ ಹಾಕಿ. ನೀವು ಏನೂ ಹಾಕಬೇಡಿ ಎಂದು ನಾನು ಹೇಳುವುದಿಲ್ಲ. ನಿಮ್ಮ ಇಲಾಖೆ ನಡೆಯಬೇಕಾದರೆ, ರೈತರೂ ಕೂಡ ಬದುಕಬೇಕಾಗಿದೆ, ನೀವು ಒಳ್ಳೆಯ ಗುಣಮಟ್ಟದ ವಿದ್ಯುತ್ತನ್ನು ಕೊಡುವಂಥದ್ದು, ಸುಟ್ಟುಹೋದ ಟಿ. ಸಿ. ಯನ್ನು ತಕ್ಷಣ ರಿಪೇರಿ ಮಾಡುವಂಥದ್ದು, ಅವನ ಅಕ್ರಮವನ್ನು ಸಕ್ರಮ ಮಾಡುತ್ತೇವೆ ಎಂದು ನೀವು ಹೆಸರನ್ನು ತೆಗೆದುಕೊಂಡಿರೇ ಹೊರತು, ದೊಡ್ಡದಾಗಿ ಪ್ರಚಾರ ಆಯಿತೇ ಹೊರತು, ಅಕ್ರಮ ಸಕ್ರಮ ಖಾಯಂ ಮಾಡಿದರೂ ವಿದ್ಯುತ್ತೇ ಬರದಿದ್ದರೆ ಅವನೇನು ಮಾಡಬೇಕು ಹೇಳಿ. ಅವನ ತಲೆಯ ಮೇಲೆ ಅವನೇ ಚಪ್ಪಡಿ ಎಳೆದುಕೊಳ್ಳಬೇಕಾಗಿದೆಯಷ್ಟೆ ಆದುದರಿಂದ ನಾನು ಕೇಳಿತ್ತಿದ್ದೇನೆ. ನೀವು ಯಾವಾಗ ಕಂಬವನ್ನು ಹಾಕುತ್ತೀರಾ?, ಯಾವಾಗ ಟಿ. ಸಿ. ಗಳನ್ನು

ಕೊಡುತ್ತೀರಾ? ಕುಡಿಯುವ ನೀರಿಗೆ ಆದ್ಯತೆ ಮೇಲೆ ಅದು ಬಂದಂಥ ಮೂರ್ನಾಲ್ಕು ದಿವಸದಲ್ಲಿಯೇ ನೀವು ಟಿ. ಸಿ. ಯನ್ನು ಕೊಡದೆ ಇದ್ದರೆ ಅವನ ಗತಿ ಏನಾಗಬೇಕು, ಐ. ಪಿ. ಸೆಟ್‌ನ್ನು ಹೊಂದಿರುವಂಥ ರೈತ ಬದುಕಬೇಕೋ ಬೇಡವೋ, ಆಮೇಲೆ ಈ ಬಡ್ಡಿ ಬಗ್ಗೆ ದಯಮಾಡಿ ನಾನು ನಿಮಗೆ ಹೇಳುತ್ತಿದ್ದೇನೆ. ನಿಮಗೆ ಒಳ್ಳೆಯ ಹೆಸರು ಬರುತ್ತದೆ. ನೀವು ಅಕ್ರಮ-ಸಕ್ರಮ ಎಷ್ಟು ಮಾಡಿದಿರೋ ಅಷ್ಟೇ ದೊಡ್ಡ ಜವಾಬ್ದಾರಿ ನಿಮ್ಮ ಮೇಲೆ ಇದೆ. 6 ಪರ್ಸೆಂಟ್‌ಗೆ ಸಹಕಾರಿ ಸಾಲವನ್ನು ಕೋ-ಆಪರೇಟಿವ್ ಇನ್ಸ್‌ಟಿಟೂಷನ್ಸ್ ಕೊಡುತ್ತಿರುವಂಥ ಇಂಥ ಕಾಲದಲ್ಲಿ 24 ಪರ್ಸೆಂಟ್ ಬಡ್ಡಿ ಹಾಕುವುದು ಯಾವ ಧರ್ಮ ಸ್ವಾಮಿ? ವರ್ಷಕ್ಕೊಮ್ಮೆ ಬಿಲ್ ಮಾಡಿ, ಕಟ್ಟದಿದ್ದವರ ಹತ್ತಿರ ನಾಮಿನಲ್ ಚಾರ್ಜ್ ವಸೂಲು ಮಾಡಿ. ನಾಮಿನಲ್ ಬಡ್ಡಿ ಹಾಕುವಂಥ ವ್ಯವಸ್ಥೆಯನ್ನು ಮಾಡಬಹುದೇ ಎಂಬ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾದ ಉತ್ತರವನ್ನು ಹೇಳುತ್ತಾರೆ ಎಂದು ನಾನು ನಿರೀಕ್ಷೆ ಮಾಡುತ್ತೇನೆ. ನಮ್ಮ ಶಿವಮೊಗ್ಗ ಜಿಲ್ಲೆಯ ಸಾಗರ್ ಸಬ್ ಡಿವಿಶನ್ ಗತಿಯೇನು, ನಾವು ಬದುಕಬೇಕೋ, ಬೇಡವೋ ಎಂಬ ಬಗ್ಗೆ ದಯಮಾಡಿ ಹೇಳಿ ಸ್ವಾಮಿ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರು ಐ. ಪಿ. ಸೆಟ್‌ಗಳ ಅಕ್ರಮ-ಸಕ್ರಮ ಮಾಡುವ ಬಗ್ಗೆ ಎಷ್ಟು ಹಣ ವಸೂಲಾಗಿದೆ ಎಂಬ ಬಗ್ಗೆ ಕೇಳಿದ್ದಾರೆ, ಒಟ್ಟು 1 ಲಕ್ಷ 32 ಸಾವಿರ, ಏನು ಐ. ಪಿ. ಸೆಟ್‌ಗಳು ಅಕ್ರಮ-ಸಕ್ರಮದಲ್ಲಿ ಇತ್ತೋ ಅದರಲ್ಲಿ ಸುಮಾರು 57 ಸಾವಿರ ಐ. ಪಿ. ಸೆಟ್‌ಗೆ ಈಗ ಅಕ್ರಮ ಸಕ್ರಮದಲ್ಲಿ ಹಣವನ್ನು ರೈತರು ಕಟ್ಟಿದ್ದಾರೆ. ಒಟ್ಟು 57 ಕೋಟಿ ರೂಪಾಯಿಗಳು ಇದರಲ್ಲಿ ವಸೂಲಾತಿಯಾಗಿದೆ. ಈ ವರ್ಷದಲ್ಲಿ 100 ಕೋಟಿ ರೂಪಾಯಿಗಳನ್ನು ಹಣಕಾಸಿನ ಇಲಾಖೆಯಿಂದ ಪಡೆದು ಅಕ್ರಮ-ಸಕ್ರಮ ಮಾಡುವುದಕ್ಕಾಗಿ ನಾವು ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಇದನ್ನು ಎರಡು ಹಂತಗಳಲ್ಲಿ ಅಂದರೆ, ಡಿಸೆಂಬರ್ ಹಾಗೂ ಮಾರ್ಚ್ 31 ರೊಳಗೆ ಮಾಡಿಕೊಡಬೇಕೆಂದು ಹೇಳಿ ನಮ್ಮ ಇಲಾಖೆಯವರು ಈಗಾಗಲೇ ಕ್ರಮ ತೆಗೆದುಕೊಂಡಿದ್ದಾರೆ, 100 ಕೋಟಿ ರೂಪಾಯಿಗಳ ಸರ್ಕಾರದ ಅನುದಾನ ಈ ವರ್ಷದ ಬಜೆಟ್‌ನಲ್ಲಿ ಇದೆ. ಬಾಕಿ ಉಳಿದ ಹಣವನ್ನು ನಮ್ಮ 5

ಕಂಪನಿಯವರು ಹಾಕಿ ಮಾಡಿಸುವಂಥ ಕಾರ್ಯಕ್ರಮವಾಗಿದೆ. ಅದನ್ನು ನಾನು ಮಾಡಿಸಿಕೊಡುತ್ತೇನೆ. ಏನು ಅಕ್ರಮ-ಸಕ್ರಮ ದುಡ್ಡಿದೆ, ಅದನ್ನು ಪ್ರೆಯಾರಿಟಿವೈಸ್ ಮೊದಲ ಆದ್ಯತೆಯ ಮೇರೆಗೆ ಅದನ್ನು ಮಾಡಿಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ನಾನು ಮಾಡುತ್ತೇನೆ. ಇನ್ನು ಇದಲ್ಲದೆ ತಾವೇನು ಟಿ. ಸಿ. ಗಳು ಸುಟ್ಟಿರುವ ಬಗ್ಗೆ ಹೇಳಿದ್ದೀರಿ ಇದರಲ್ಲಿ ಕೆಲವು ಕಡೆ ಫೇಲ್ಯೂರ್ ಆಗಿದೆ. ಕೆಲವು ಕಡೆ ಹೆಚ್ಚಿಗೆ ಲೋಡ್ ಅಕ್ರಮ-ಸಕ್ರಮದ ರೀತಿಯಲ್ಲಿಯೇ ಕೆಲವರು ಏನು ಮಾಡಿದ್ದಾರೆಂದರೆ ಹತ್ತು ಐ. ಪಿ. ಸೆಟ್ ಇರುವಂಥ ಕಡೆ 25, 40 ಐ.ಪಿ. ಸೆಟ್‌ಗಳನ್ನು ಹ್ಹಾಕಿರುವುದರಿಂದ ಅಲ್ಲಿ ಟಿ. ಸಿ ಗಳು ಸುಡುತ್ತಿವೆ ಎಂದು ನಮ್ಮ ಗಮನಕ್ಕೆ ಬಂದಿದೆ. ಆದರೂ ಸಾಗರ ಸಬ್ ಡಿವಿಶನ್‌ನಲ್ಲಿ ಏನಾಗಿದೆಯೋ ಆ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮತ್ತು ನಿಮ್ಮ ಜೊತೆ ಇದಾದಮೇಲೆ ಮಾತನಾಡಿ ಅದನ್ನು ಮಾಡಿಸುವಂಥ ಕಾರ್ಯಕ್ರಮಕ್ಕೆ ನಾನು ಪ್ರಯತ್ನವನ್ನು ಮಾಡುತ್ತೇವೆ. ಎಂದು ಹೇಳಿ, ಮತ್ತೆ ಇದಲ್ಲದೆ ಕುಡಿಯುವ ನೀರಿನದು ಕೆಲವು ಐ.ಪಿ. ಸೆಟ್‌ಗಳು ಯಾವುದಿದೆ ಕೆಲವು ಟಿ.ಸಿ. ನಿಜವಾಗಿ ದುಡ್ಡು ಕಟ್ಟಿರುವಂಥ ರೈತರದ್ದು ಯಾರದ್ದು ಇದೆ. ಏಕೆಂದರೆ ಈಗ ಕೆಲವು ಕನೆಕ್ಷನ್ ತೆಗೆದುಕೊಂಡು ಕೆಲವು ಕಡೆ ಹೆಚ್ಚಿಗೆ ದಿ ಓವರ್‌ಲೋಡ್ ಹಾಕಿರುವುದು, ಅಂಥದ್ದೇನಾದರೂ ಇದ್ದರೆ ಅದಕ್ಕೆ ಬೇರ್ಪಡಿಸಿ ಮಾಡುವಂಥ ಕಾರ್ಯಕ್ರಮಕ್ಕೂ ಕೂಡ ನಾನು ಪ್ರಯತ್ನ ಪಡುತ್ತೇನೆ. ಮತ್ತೆ ಇದಲ್ಲದೆ ಬಡ್ಡಿ ಬಗ್ಗೆ ತಾವು ಹೇಳಿದಿರಿ, 2 ಪರ್ಸೆಂಟ್ ಬಡ್ಡಿಯನ್ನು ತಿಂಗಳಿಗೆ ಹಾಕುತಿದ್ದರು. ನಾನು ಇದನ್ನು ಮಾಡಿದ್ದಲ್ಲ. ಸುಮಾರು ಹಿಂದೆ 15 ವರ್ಷದಿಂದಲೂ ಇದನ್ನು ಹಾಕುತ್ತಿದ್ದಾರೆ. ಇದರ ಬಗ್ಗೆ ಹಿಂದೆಯೇ ಕೆ.ಇ.ಆರ್.ಸಿ. ಯಿಂದ ಅಪ್ರೂವ್ ಮಾಡಿಸಿಕೊಂಡಿದ್ದಾರೆ. ಇದರ ಬಗ್ಗೆ ಒಂದು ಪರಿಶೀಲನೆಯನ್ನು ನಾನು, ಏಕೆಂದರೆ ನಮ್ಮ ಅಧಿಕಾರಿಗಳಿಗೆ ಇವೊತ್ತು ಬೆಳೀಗ್ಗೆನೇ ತಾವು ಹೇಳಿದ ಮೇಲೆ ಇದರ ಬಗ್ಗೆ ನೋಡಿ ನನಗೆ ಹೇಳಿ ಎಂದು ಹೇಳಿದ್ದೇನೆ. ಅದರ ಬಗ್ಗೆ ನಾನು ತಿಳಿದುಕೊಂಡು ತಮಗೆ ಕರೆಕ್ಟ್ ಮಾಹಿತಿಯನ್ನು ಹೇಳುತ್ತೇನೆ. ಆದರೆ ಎರಡು ಪರ್ಸೆಂಟ್ ಬಡ್ಡಿ ಹಾಕುವುದನ್ನು ನಾನು ಮಾಡಿದ್ದಲ್ಲ. 15 ವರ್ಷದ ಹಿಂದೆಯೇ ಮಾಡಿದ್ದು. ಯಾರು ಬಿಲ್ ಕಟ್ಟುವುದಿಲ್ಲ ಅವರಿಗೆ ಪ್ರತಿ ತಿಂಗಳಿಗೆ ಎರಡು ಪರ್ಸೆಂಟ್ ಬಡ್ಡಿ ಹಾಕಬೇಕು ಎಂದೆನೋ ಮಾಡಿದ್ದರಂತೆ. ಅದು ತಾವು ಹೇಳಿದಂತೆ 24

ಪರ್ಸೆಂಟ್ ಬಡ್ಡಿ ವರ್ಷಕ್ಕೆ ಆಗುತ್ತದೆ ಎಂದು ಹೇಳಿದ್ದೀರಿ. ಇದರಲ್ಲಿ ನಾನು ಹೇಳುವುದೇನೆಂದರೆ ಫಲಾನುಭವಿಗಳು ಯಾರಿದ್ದಾರೋ ಅವರು ಬಿಲ್‌ನ್ನು ತಿಂಗಳಿಗೆ ಸರಿಯಾಗಿ ಕಟ್ಟಿದರೆ ಆ ಬಡ್ಡಿಯೇ ಬರುವುದಿಲ್ಲ. ಯಾರು ಕಟ್ಟುವುದಿಲ್ಲವೋ ಅಂಥವರಿಂದ ಸರ್ಕಾರಕ್ಕೆ ಎಷ್ಟು ಪರ್ಸೆಂಟ್ ಲಾಸ್ ಆಗುತ್ತದೆ, ಎಂಬ ವಿಷಯಗಳನ್ನೆಲ್ಲಾ ತಿಳಿದುಕೊಂಡು ನಾನು ಮತ್ತೆ ನಿಮಗೆ ತಿಳಿಸುತ್ತೇನೆ.

ಏಕೆಂದರೆ ಈ ರಾಜ್ಯದಲ್ಲಿ ಬಿಲ್‌ನ್ನು ಈ ರೀತಿಯಲ್ಲಿ ಎಷ್ಟು ಜನರು ಕಟ್ಟುತ್ತಾರೆ. ಎಷ್ಟು ಜನರ ಮೇಲೆ ಈ ರೀತಿಯಲ್ಲಿ ಬಡ್ಡಿ ಬೀಳುತ್ತದೆ. ಇದರಿಂದ ಸರ್ಕಾರದ ಮೇಲೆ ಏನಾಗುತ್ತದೆ, ಅನುಕೂಲ ಫಲಾನುಭವಿಗಳಿಗೆ ಯಾವ ರೀತಿಯಲ್ಲಿ ಮಾಡಬಹುದು ಎಂಬುದನ್ನೆಲ್ಲಾ ತಿಳಿದುಕೊಂಡು ನಾನು ತಮಗೆ ಹೇಳುತ್ತೇನೆ.

ಶ್ರೀ ಬಿ.ಎಸ್ ಯಡಿಯೂರಪ್ಪ : ಒಂದ್ನಿಮಿಷ ಈಲ್ಡ್ ಆಗಿ. ಇಲ್ಲಿ ಎರಡೇ ಪ್ರಶ್ನೆ ಇರುವುದು. ತೀರ್ಮಾನ ನಿಮಗೆ ಬಿಟ್ಟಿದ್ದು, ಒಂದನೆಯದಾಗಿ ಈಗೇನು ಟಿ.ಸಿ. ಗಳು ಸುಡುತ್ತಿವೆಯಲ್ಲಾ ಆ ರೀತಿ ಆಗುತ್ತಿರುವುದು ಕೇವಲ ಸಾಗರ ಸಬ್ ಡಿವಿಶನ್‌ಗೆ ಮಾತ್ರ ಸೀಮಿತವಾದಂಥದ್ದಲ್ಲ. ಸಾಗರ ಸಬ್ ಡಿವಿಶನ್‌ನಲ್ಲಿ 120 ಟಿ.ಸಿ.ಗಳು ಸುಟ್ಟು ಅಲ್ಲಿಯೇ ಬಿದ್ದಿವೆ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಸಚಿವರು) : ಬೇಕಾದರೆ ಸಾಗರದಲ್ಲಿಯೇ ಒಂದು ಟಿ.ಸಿ. ರಿಪೇರಿ ಸೆಂಟರನ್ನು ಮಾಡಿಕೊಡುವುದಕ್ಕೆ ನಾನು ಪ್ರಯತ್ನ ಪಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಅಲ್ಲಿ ಕಂಟ್ರ್ಯಾಕ್ಟರ್ ಟಿ.ಸಿ. ರಿಪೇರಿ ಮಾಡುವುದಕ್ಕೆ ಏಕೆ ಮುಂದೆ ಬರುತ್ತಿಲ್ಲವೆಂದರೆ ಅವನು ಒಂದು ಸಾರಿ ರಿಪೇರಿ ಮಾಡಿದ ಮೇಲೆ ಇಷ್ಟು ತಿಂಗಳು ಬಾಳಿಕೆಗೆ ಬರಬೇಕು ಎಂದು ಹೇಳಬೇಕಲ್ಲಾ. ಆದರೆ ಅಲ್ಲಿ ಓವರ್‌ಲೋಡ್ ಅಗುತ್ತಿರುವುದರಿಂದ 15 ದಿವಸಗಳಲ್ಲಿಯೇ ಟಿ.ಸಿ. ಗಳು ಸುಟ್ಟುಹೋಗುತ್ತಿವೆ. ಇದು ಇಡೀ ರಾಜ್ಯದಲ್ಲಿ ಇರುವ ಪರಿಸ್ಥಿತಿಯಾಗಿದೆ. ಆದುದರಿಂದ ಓವರ್‌ಲೋಡ್ ಆಗದಂತೆ ನೀವು ಮಾಡಬೇಕೆಂದರೆ ನೀವು ಲೈನ್ ಇಂಪ್ರೂವ್ ಮಾಡಿ ಎಲ್ಲಿ ಟಿ.ಸಿ. ಗಳ ಅಗತ್ಯತೆ ಇದೆ. ಅಲ್ಲಿ ಟಿ.ಸಿ. ಗಳನ್ನು ಹಾಕಿದರೆ ಮಾತ್ರ ಓವರ್‌ಲೋಡ್ ಹಾಕುವುದು ತಪ್ಪುತ್ತದೆ. ಇದನ್ನು ನೀವು ಮಾಡದೇ ಹೋದರೆ ನೀವೇನು

ಈಗ ಅಕ್ರಮ ಸಕ್ರಮ ಯೋಜನೆಯಲ್ಲಿ 57 ಸಾವಿರ ಐ.ಪಿ. ಸೆಟ್‌ಗಳಿಂದ 57 ಕೋಟಿ ರೂಪಾಯಿಗಳನ್ನು ಪಡೆದುಕೊಂಡಿದ್ದೀರಿ ಇದಕ್ಕೆ ಇನ್ನೂ ಒಂದು ನೂರು ಕೋಟಿ ರೂಪಾಯಿಗಳನ್ನು ಹಾಕಿದರೂ ಕೂಡ ಇದು ಆಗುವುದಿಲ್ಲ. ಆದುದರಿಂದ ತಾವು ಒಂದು ಬಾರಿ ಇದರ ಬಗ್ಗೆ ಇಂಪ್ರೂವ್‌ಮೆಂಟ್ಸ್ ಕಡೆ ಗಮನ ಕೊಡದೆ ಇದ್ದರೆ ಟಿ.ಸಿ. ಗಳು ಸುಡುತ್ತಲೇ ಇರುತ್ತವೆ. ಇವೊತ್ತು ಮಳೆಗಾಲದಲ್ಲಿಯೂ ಕೂಡ ಕುಡಿಯುವ ನೀರಿಗೆ ಹಾಹಾಕಾರ ಇರುವುದನ್ನು ನಾವು ನೋಡುತ್ತಿದ್ದೇವೆ. ಇನ್ನು ಎರಡು ಪರ್ಸೆಂಟ್ ಬಡ್ಡಿ ಹಾಕುತ್ತಿರುವ ಬಗ್ಗೆ ದಯಮಾಡಿ ತಾವು ಮಾನವೀಯತೆಯ ದೃಷ್ಟಿಯಿಂದ ನೋಡಬೇಕಾಗುತ್ತದೆ. ನಾವೂ ಯಾರೂ ಗಮನ ಕೊಡಲಿಲ್ಲ. 15 ವರ್ಷದಿಂದ ಆ ರೀತಿ ಇದ್ದರೆ ಅಕ್ಷಮ್ಯ ಅಪರಾಧವೇ ಆಗಿದೆ. ಇಂದು 6 ಪರ್ಸೆಂಟ್ ಬಡ್ಡಿ ದರದಲ್ಲಿ ಸಹಕಾರಿ ಲೋನ್ ಕೋಡುತ್ತಿರುವಂಥ ಸಂದರ್ಭದಲ್ಲಿ ಯಾರು ಪ್ರತಿ ತಿಂಗಳಿಗೆ 2 ಪರ್ಸೆಂಟ್ ಬಡ್ಡಿ ಕಟ್ಟುವುದಕ್ಕೆ ಆಗುತ್ತದೆ? ರೈತನಿಗೇನಾದರೂ ಪ್ರತಿ ತಿಂಗಳು ಆದಾಯ ಬರುತ್ತದೆಯೇ ? ನೀವೂ ರೈತರ ಮಗ. ಆರು ತಿಂಗಳಿಗೋ, ವರ್ಷಕ್ಕೋ ಒಮ್ಮೆ ಉತ್ಪನ್ನ ಬರುತ್ತದೆ. ಆರು ತಿಂಗಳಿಗೆ ಒಮ್ಮೆ ಮಾಡಿ, ಮೂರು ತಿಂಗಳಿಗೆ ಒಮ್ಮೆ ಬಿಲ್ ಮಾಡುವುದರ ಬದಲು ನಾಮಿನಲ್ ಆಗಿ ಏನಾದರೂ ಹಾಕದೇ ಇದ್ದರೆ ಬಹುಶ: ಈಗ ಮಾಡಿರುವುದು ಎಷ್ಟರ ಮಟ್ಟಿಗೆ ಧರ್ಮ ನೀವೇ ಹೇಳಿ. ಹಿಂದೆ ಅಪ್ಪನ ಕಾಲದಲ್ಲಿ ಏನು ನಡೆದುಕೊಂಡು ಬಂದಿತ್ತೋ ಅದೆ ಈಗಲೂ ನಡೆದುಕೊಂಡು ಬರಬೇಕೇ?.

ಶ್ರೀ ಎಚ್.ಡಿ. ರೇವಣ್ಣ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ಸಲಹೆಯನ್ನು ಕೊಟ್ಟಿದ್ದಾರೆ ಅದರ ಬಗ್ಗೆ ನಾನು ಪರಿಶೀಲನೆಯನ್ನು ಮಾಡಿ, ಏಕೆಂದರೆ ಅಧಿಕಾರಿಗಳು ಮತ್ತು ನಿಮ್ಮ ಜೊತೆಯಲ್ಲಿಯೇ ಮಾತನಾಡಿ ಅದಕ್ಕೆ ಒಂದು ಸೂತ್ರವನ್ನು ಕಂಡುಹಿಡಿಯುತ್ತೇನೆ. ಇದರ ಜೊತೆ ರಿಪೇರಿ ಸೆಂಟರದ್ದು ಏನು ಇಂಪ್ರೂವ್‌ಮೆಂಟ್ ಇದೆ ಅದನ್ನು ಸಾಧ್ಯವಾದಷ್ಟು ನಾನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎ. ಪಾಪರೆಡ್ಡಿ (ರಾಯಚೂರು): ಮಾನ್ಯ ಉಪಾಧ್ಯಕ್ಷರೆ, ನಮ್ಮ ರಾಯಚೂರು ಜಿಲ್ಲೆಯಲ್ಲಿ ಮೂರು ಸಾವಿರ ಜನರು ಅಕ್ರಮ ಸಕ್ರಮದಲ್ಲಿ ದುಡ್ಡನ್ನು ತುಂಬಿದ್ದಾರೆ. ಮೂರುವರ್ಷದ ಹಿಂದೆಯೇ ಹಣ ಕಟ್ಟಿದ್ದಾರೆ. ಒಟ್ಟು

ಆರು ಕೋಟಿ ರೂಪಾಯಿಗಳನ್ನು ತುಂಬಿದ್ದಾರೆ. ಆದರೆ ಇದುವರೆಗೂ ಅಲ್ಲಿ ಕಂಬವನ್ನು ಹಾಕಿಲ್ಲ. ಲೈನನ್ನು ಎಳೆದಿಲ್ಲ. ಟಿ.ಸಿ. ಗಳೂ ಬರಲಿಲ್ಲ. ಅಲ್ಲಿ ಕೆಲಸವೇ ಆಗಿಲ್ಲ. ಅಲ್ಲಿ ಅಧಿಕಾರಿಗಳನ್ನು ಕೇಳಿದರೆ ನೀವು ಕೆ.ಇ.ಬಿ.ಗೆ ಕೊಟ್ಟಿದ್ದೀರಿ. ಆದರೆ ಈಗ ಇಲ್ಲಿ ಬೆಸ್ಕಾಂ ಆಗಿದೆ. ಆದುದರಿಂದ ಇದು ನಮಗೆ ಸಂಬಂಧವಿಲ್ಲ. ಸರ್ಕಾರದಲ್ಲಿ ಆ ಹಣವಿದೆ. ಸರ್ಕಾರದ ಮೇಲೆ ಒತ್ತಡ ತಂದು ನಮಗೆ ಹಣ ಕೊಡಿಸಿ. ನಂತರ ಕೆಲಸವನ್ನು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ.

ದಯಮಾಡಿ ರೈತರು ಸಾಲಸೋಲ ಮಾಡಿ ಹಣ ತುಂಬಿದಾಗ ಆ ಹಣವನ್ನು ತೆಗೆದುಕೊಂಡು ಸರ್ಕಾರ ಕೆಲಸ ಮಾಡಿಲ್ಲ. ದಯಮಾಡಿ ಎಲ್ಲಾ ಕೆಲಸವನ್ನು ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ 3 ಸಾವಿರ ಎಂದು ಹೇಳಿದಂತಹ ವಿಷಯದ ಬಗ್ಗೆ ಗೊತ್ತಿಲ್ಲ. ಅದನ್ನು ತರಿಸಿ. 3 ಸಾವಿರ ಯಾವಾಗ ಕಟ್ಟಿದ್ದಾರೆ ಎನ್ನುವ ಮಾಹಿತಿ ಇಲ್ಲದೆ ಏನೂ ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಜೆ. ಸಿ. ಮಾಧುಸ್ವಾಮಿ: ಮಾನ್ಯ ಉಪಾಧ್ಯಕ್ಷರೆ, ನಮಗೂ ಅರ್ಥವಾಗುತ್ತಿಲ್ಲ. ತಾವು ಯಾರನ್ನು ಅಲೋ ಮಾಡುತ್ತಿದ್ದೀರೀ? ಏನು ನಡೆಯುತ್ತಿದೆ? ಸಭೆಯನ್ನು ಆರ್ಡರ್‌ನಲ್ಲಿಯಾಗಿ ಮಾಡಿ, ನಾವು ಹೇಳಬಾರದು ಎಂದು ಸುಮ್ಮನೆ ಕುಳಿತುಕೊಂಡಿದ್ದೇವೆ. ದಯವಿಟ್ಟು ಶಾಸನಸಭೆ ನಡೆಸಿ ಸಾರ್.

(ಆ) ವಿಷಯ: ಭಟ್ಕಳದ ಶಾಸಕರಿಗೆ ರಕ್ಷಣೆ ಒದಗಿಸುವ ವಿಚಾರ.

ಶ್ರೀ ಹೆಚ್.ಡಿ. ಬಸವರಾಜ (ವಿರಾಜಪೇಟೆ): ಮಾನ್ಯ ಉಪಾಧ್ಯಕ್ಷರೆ, ಇವತ್ತು ಶಾಸಕರ ರಕ್ಷಣೆ ವಿಚಾರದಲ್ಲಿ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಅನುಮತಿ ನೀಡಿದ್ದಕ್ಕೆ ತಮಗೆ ಅಭಿನಂದಿಸುತ್ತೇನೆ. ದಿನಾಂಕ 30.06.05 ರಂದು ಭಟ್ಕಳದ ಶಾಸಕರಾದ ಮಾನ್ಯ ಶಿವಾನಂದ ನಾಯ್ಕ ಅವರ ಆಪ್ತ ಸಹಾಯಕರಿಗೆ ಒಂದು ದೂರವಾಣಿ ಕರೆ ಬರುತ್ತದೆ. ದಿನಾಂಕ 30.06.05 ರಂದು ಶಾಸಕರು ವಿಧಾನಸೌಧದ ಒಳಗಡೆ ಇದ್ದಾರೆ. ಅವರ ಆಪ್ತ ಸಹಾಯಕರಿಗೆ ದೂರವಾಣಿ ಕರೆ ಮೊಬೈಲ್‌ಗೆ ಬರುತ್ತದೆ. ಆ ಮೊಬೈಲ್‌ಗೆ